ಇದೇ ನನ್ನನ್ನು ಮತ್ತೆ ಮತ್ತೆ ಅಲ್ಲಿಗೆ ಸೆಳೆಯುತ್ತಿತ್ತು. ಭರತವೇರಿದ ಮನಸ್ಸು ಉಕ್ಕಿ ಹರಿಯಲು ಓಡಾಡುತ್ತಿತ್ತು. ಅಲ್ಲಿ ತೆರೆದ ದ್ವಾರದಲ್ಲಿ ಅಡೆತಡೆಯಿಲ್ಲದೆ ಭಾವನೆಗಳು ಹರಿಯುತ್ತಿದ್ದವು. ಇದ್ದಕ್ಕಿದ್ದಂತೆ ನನ್ನ ನಡೆಯಲ್ಲಿ ಲಘುವಾದ ಕುಣಿತ ಸೇರಿತು. ಕಣ್ಣಲ್ಲಿ ಮಿಂಚು ಸುಳಿಯತೊಡಗಿತು. ಕಾರಣವಿಲ್ಲದೆ ತುಟಿಯಲ್ಲಿ ನಗು ಹೊಮ್ಮುತ್ತಿತ್ತು. ಸದಾ ಮನಸ್ಸಿನಲ್ಲಿ 'ಹೀಗೆ ಹೇಳಿದರೆ ಅವನು ಏನು ಹೇಳಬಹುದು ಅವನು ಹಾಗಂದರೆ ನಾನು ಏನು ಹೇಳಬೇಕು. ಅವನ ಪಾತ್ರಗಳು ಯಾಕೆ ಹೀಗೆ ಮೂಡುತ್ತವೆ. ಹೀಗೆ ಯಾಕೆ ಮಾಡಬಾರದು' ಇತ್ಯಾದಿ ಆಲೋಚನೆಗಳು ಸುತ್ತುತ್ತಿದ್ದವು. ಆದರೂ ನಮ್ಮ ನಡುವೆ ದೈಹಿಕ ಆಕರ್ಷಣೆ ಉಂಟಾಗಿರಲಿಲ್ಲ. ಆ ಬಗ್ಗೆ ನಾವು ಗಮನ ಹರಿಸಿರಲಿಲ್ಲ. ಒಂದು ದಿನ ಏನೋ ಮಾತನಾಡುತ್ತಾ 'ನಿಮಗೆ ನೀಲಿ ಸೀರೆ ತುಂಬಾ ಚೆನ್ನಾಗಿ ಕಾಣಬಹುದು' ಎಂದು ಸಹಜವಾಗಿ ಹೇಳಿ ಮತ್ತೇನೋ ಮಾತು ಮುಂದುವರೆಸಿದ. ನಾನು ಅಲ್ಲೇ ನಿಂತೆ. ಆಮೇಲಿನ ಮಾತುಗಳು ನನಗೆ ಕೇಳಿಸಲಿಲ್ಲ. ಅಂದು ಸಂಜೆ ಇಡೀ ಅಂಗಡಿಯ ಸೀರೆಯನ್ನು ಕಿತ್ತು ಹಾಕಿಸಿ ಕೊನೆಗೆ ಅತ್ಯಾಕರ್ಷಕವಾದ ನೀಲಿ ಸೀರೆಯೊಂದನ್ನು ಕೊಂಡೆ. ಮಾರನೆಯದಿನ ಅದನ್ನುಟ್ಟು ಅವನ ಮನೆಯ ಬಾಗಿಲು ಬೆಲ್ ಮಾಡಿದಾಗ ನನ್ನೆದೆ ಪರೀಕ್ಷಾ ಭವನ ಹೊಗುತ್ತಿರುವ ವಿದ್ಯಾರ್ಥಿನಿಯ ಎದೆಯಂತೆ ಡವಗುಟ್ಟುತ್ತಿತ್ತು. ಅವನೇನೂ ನನ್ನನ್ನು ಕಂಡ ತಕ್ಷಣ ಹುಚ್ಚೆದ್ದು ಅಪ್ಪಿಕೊಳ್ಳಲಿಲ್ಲ. ಒಂದು ಕ್ಷಣ ದಿಟ್ಟಿಸಿ 'ಬನ್ನಿ ಬನ್ನಿ' ಎಂದು ಕರೆದು ಒಳ ಸರಿದ. ಒಂದೂವರೆ ಗಂಟೆ ಕಾಲ ಏನೇನೋ ಮಾತುಕತೆಯಲ್ಲಿ ಸಮಯ ತುಂಬ ಕಷ್ಟದಿಂದ ಕಳೆಯಿತು. ನಿರಾಸೆಯ ದಟ್ಟ ಮೋಡ ಮನದಲ್ಲಿ ಕವಿಯುತ್ತಿದ್ದಂತೆ ಇನ್ನೇನು ಹನಿ ಉದುರಬಹುದು ಎನ್ನುವ ಆತಂಕದಲ್ಲಿ ಎದ್ದು ಹೊರಟೆ. ಬಾಗಿಲ ಹತ್ತಿರ ಬರುತ್ತಿದ್ದಂತೆ 'ಒಂದು ನಿಮಿಷ' ಎಂದು ಒಳಗೆ ಹೋದ. ನಾನು ಅಲ್ಲೇ ನಿಂತೆ. ಮತ್ತೆ ಬಂದು ಕೈಹಿಡಿದು ಮುಷ್ಟಿಯಲ್ಲಿ ಏನನ್ನೋ ಇಟ್ಟು ಮುಚ್ಚಿದ. ನಾನು ಕೈ ಬಿಡಿಸಿ ನೋಡಿದೆ. ಫಳಫಳನೆ ತಣ್ಣನೆ ಹೊಳೆಯುವ ಒಂಟಿ ಹರಳಿನ ನೀಲಿ ಓಲೆ. ಹೊಸದಲ್ಲ. ಹಳೆಯದು. ದಡದಡನೆ ಮಳೆ ಸುರಿದೇ ಬಿಟ್ಟಿತು. ಮರುಕ್ಷಣ ನಾನು ಅವನ ಅಪ್ಪುಗೆಯಲ್ಲಿದ್ದೆ.

ಒಂದು ಚುಂಬನಕ್ಕೆ ಅಂತಹ ಶಕ್ತಿ ಇದೆ ಎಂದು ಯಾರಾದರೂ ಹೇಳಿದರೆ ನಾನು ನಕ್ಕು ಬಿಡುತ್ತಿದ್ದೆ. ಬರಿಯ ಕೆಮಿಸ್ಟ್ರಿ ಆಗಿರಲಿಲ್ಲ ಅದು. ನನ್ನೊಳಗನ್ನೆಲ್ಲ ಹೀರಿ ಹಿಪ್ಪೆ ಮಾಡಿದ ಮಾಂತ್ರಿಕ ಕ್ಷಣವಾಗಿತ್ತು ಅದು. ಅದೇ ಕ್ಷಣದಲ್ಲಿ ಏನೋ ಒಂದು ಮಧುರ ಭಾವ ನನ್ನ ಮೈಯಲ್ಲಿ ಉಕ್ಕಿ ಹರಿದು ಒಂದಿಂಚೂ ಬಿಡದಂತೆ ಆಕ್ರಮಿಸಿಕೊಂಡು ಬಿಟ್ಟಿತು. ಪ್ರಳಯವಾಗಿದ್ದರೂ ಆಗ ನನಗೆ ಅದರ ಪರಿವೆ ಇರುತ್ತಿರಲಿಲ್ಲ. ಆ ಗಳಿಗೆ ಅನಂತವಾಗಲಿ ಎಂದು ಮನ ಹಾರಿ ಬೀಳುತ್ತಿತ್ತು. ಆದರೆ ಹಾಗಾಗಲಿಲ್ಲ. ಒಂದು ಜೊತೆ ತೋಳುಗಳು ನನ್ನನ್ನು ಮೃದುವಾಗಿ ಬಿಡಿಸಿ ಅತ್ಯಂತ ಮಮತೆಯಿಂದ ಬಾಗಿಲು ದಾಟಿಸಿದವು. ನಾನು ಹೊರಬಂದೆ.

ಆಮೇಲೆ ಎಂದೂ ನಾವು ಅದರ ಬಗ್ಗೆ ಮಾತಾಡಲಿಲ್ಲ. ಅದರ ಸೂಚನೆ ಕೊಡಲಿಲ್ಲ. ನೆನಪಿಸಿಕೊಳ್ಳಲಿಲ್ಲ. ಯಥಾಪ್ರಕಾರ ನಮ್ಮ ಮಾತು, ಚರ್ಚೆ, ನಗೆ ಮುಂದುವರೆಯಿತು. ಆದರೆ ಆಲಿಬಾಬಾನ ಗುಹೆ ಒಂದು ಕ್ಷಣ ತೆರೆದು ತನ್ನ ಅನಂತ ಐಶ್ವರ್ಯವನ್ನು ತೋರಿ ಮತ್ತೆ ಮುಚ್ಚಿಕೊಂಡು ಬಿಟ್ಟಿತ್ತು. ನನ್ನ ಮನಸ್ಸು ಮತ್ತೆ ಮತ್ತೆ ಅದೇ ಗುಹೆಯ ಎದುರು ನಿಂತು 'ತೆಗೆಯೇ ಸೇಸೇಮ್' ಎಂದು ಚೀರಿಡುತ್ತಿತ್ತು. ಆ ಬಾಗಿಲೂ ನಾನು ದಿವ್ಯಮಂತ್ರ ಹೇಳಲಿ ಎಂದೇ ಕಾಯುತ್ತಿತ್ತೇನೋ.

ಮಡಿಕೇರಿಗೆ ಹೋಗಿ ಸಮ್ಮೇಳನ ವರದಿ ಮಾಡಿ ಎಂದು ಸಂಪಾದಕರು ಹೇಳಿದ್ದರು. ಮೊದಲು